# ಸಿಗ್ನೇಚರ್ ಎಡಿಷನ್!

## ನಿಮ್ಮ ಕಾರುಗಳನ್ನು ನೀವೇ ವಿನ್ಯಾಸ ಮಾಡಿಕೊಳ್ಳಿ..






ರಸ್ತೆಯಲ್ಲಿ ಹತ್ತಾರು ಕಾರುಗಳ ಮಧ್ಯೆ, ವಿಶಿಷ್ಟವಾದ ಕಾರು ಎದ್ದು ಕಾಣುತ್ತದೆ. ವಿವಿಧ ಬ್ರ್ಯಾಂಡ್‌ಗಳ ಕಾರುಗಳನ್ನು ಹೊಂದುವುದಷ್ಟೇ ಅಲ್ಲ ತಮ್ಮದೇ ಆದ ವಿನ್ಯಾಸದ ಕಾರುಗಳನ್ನು ಹೊಂದುವ ಖಯಾಲಿ ಈಗ ಹೆಚ್ಚುತ್ತಿದೆ. ಹೀಗಾಗಿ 'ಕಾರ್ ಮಾಡಿಫಿಕೇಷನ್' ಇಂದು ಅತ್ಯಂತ ದೊಡ್ಡ ಉದ್ಯಮವಾಗಿ ಬೆಳೆದು ನಿಂತಿದೆ.

ನಾಲ್ಕಾರು ಸಾವಿರ ರೂಪಾಯಿ ವೆಚ್ಚದ 'ಮಾಡಿಫಿಕೇಷನ್'ನಿಂದ ಆರಂಭವಾಗಿ 40–50 ಲಕ್ಷ ರೂಪಾಯಿವರೆಗಿನ 'ಮಾಡಿಫಿಕೇಷನ್'ಗಳೂ ಇವೆ. ಭಾರತದಲ್ಲಿ ಕಾರ್ ಮಾಡಿಫಿಕೇಷನ್ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದು ದಿಲೀಪ್ ಛೋಪ್ರಾ ಅವರ ಡಿಸಿ. ಕೆಲವು ಕಾರುಗಳಿಗೆ ಡಿಸಿ ಅವರ 'ರೆಡಿ ಟು ಫಿಟ್ ಕಿಟ್'ಗಳೂ ಇವೆ. ಇನ್ನು ನಮ್ಮ ಅಭಿರುಚಿಗೆ ತಕ್ಕಂತೆ ಮಾಡಿಫಿಕೇಷನ್ ಅನ್ನು 'ಕಸ್ಟಮೈಸ್' ಮಾಡುವ ಆಯ್ಕೆಯೂ ಇದೆ. ಮೇಲೆ ಹೇಳಿದಂತಹ ಮಾಡಿಫಿಕೇಷನ್ ಖಯಾಲಿ ಜನಸಾಮಾನ್ಯರಲ್ಲೂ ಇದೆ, ದೊಡ್ಡ–ದೊಡ್ಡ ಸ್ಟಾರ್‌ಗಳಿಗೂ ಇದೆ.

■ ಜಯಸಿಂಹ ಆರ್.

ಕೆಲವು ಐಷಾರಾಮಿ ಕಾರು ತಯಾರಿಕಾ ಕಂಪನಿಗಳು ತಾವೇ ಗ್ರಾಹಕರಿಗೆ 'ಕಸ್ಟಮೈಸ್' ಸೇವೆಯನ್ನೂ ನೀಡುತ್ತಿವೆ. ಲ್ಯಾಂಡ್ ರೋವೆರ್, ಮರ್ಸಿಡೆಸ್ ಬೆಂಜ್, ರೋಲ್ಸ್ ರಾಯ್ಸ್ ಭಾರತದಲ್ಲಿ ಇಂತಹ ಕಸ್ಟಮೈಸ್ ಸೇವೆಯನ್ನೂ ನೀಡುತ್ತಿರುವ ಕೆಲವು ಪ್ರಮುಖ ಲಕ್ಷುರಿ ಕಂಪನಿಗಳು.

ಲ್ಯಾಂಡ್‌ರೋವೆರ್‌ನ ರೇಂಜ್‌ರೋವೆರ್ ಆಟೊಬಯೋಗ್ರಫಿ ಎಲ್‌ಡಬ್ಲ್ಯುಬಿ ಕಸ್ಟಮೈಸ್ ಅವಕಾಶವಿರುವ ಐಷಾರಾಮಿ ಎಸ್‌ಯುವಿಗಳಲ್ಲಿ ಒಂದು. ಇದರ ಬೆಲೆ ಆರಂಭವಾಗುವುದೇ 3.75 ಕೋಟಿ ರೂಪಾಯಿಗಳಿಂದ. ಹೈ ಎಂಡ್ ಅವತರಣಿಕೆ 4.2 ಕೋಟಿ ರೂಪಾಯಿಗಳನ್ನು ಮೀರುತ್ತದೆ. ಇವು ಸಾಮಾನ್ಯ ರೇಂಜ್ ರೋವೆರ್‌ಗಳಿಗಿಂತ ತೀರಾ ಉದ್ದವಾಗಿರುತ್ತವೆ. ರಸ್ತೆಯಲ್ಲಿ ಬೇರೆಲ್ಲಾ ವಾಹನಗಳ ಮಧ್ಯೆಯೂ ಇವು ಎದ್ದು ಕಾಣುತ್ತವೆ. ಆದರೆ ಇವುಗಳ

